ಓಎಸ್.262/2022
ಪಿ.ಡಬ್ಲ್ಯೂ-3

**<u>ದಿನಾಂಕಃ 24-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಎಂ.ಎನ್.ಬಿ ವಕೀಲರಿಂದಃ-**

ನನ್ನ ಸ್ವಂತ ಊರು ಮುತ್ಯಾಲಮ್ಮನಹಳ್ಳಿ. ದಾವಾ ಆಸ್ತಿ ಇರುವುದು ಕಂತಾನಹಳ್ಳಿಯಲ್ಲಿ. ದಾವಾ ಆಸ್ತಿ ಇರುವುದು ಐ.ಡಿ.ಹಳ್ಳಿಯಲ್ಲಿ ನಾವಿರುವುದು ಕೊಡಿಗೇನಳ್ಳಿ ಹೋಬಳಿಯಲ್ಲಿ. ದಾವಾ ಆಸ್ತಿಯ ಖಾತೆ ಪಹಣಿಯನ್ನು ನೋಡಿದ್ದೇನೆ. ಈಗಲೂ ಸಹ ದಾವಾ ಆಸ್ತಿಯ ಖತೆ ಪಹಣಿ ವಾದಿಯ ಹೆಸರಿನಲ್ಲಿದೆ. ದಾವಾ ಆಸ್ತಿದ ಸ.ನಂ.15/1 ಎ. ದಾವಾ ಆಸ್ತಿಯನ್ನು ವಾದಿಯು ಪ್ರತಿವಾದಿಗೆ ಶುದ್ಧ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ದಾವಾ ಆಸ್ತಿಯ ಖಾತೆ ಪಹಣಿ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಆಸ್ತಿಯ ಖರೀದಿ ವ್ಯವಹಾರದಲ್ಲಿ ನಾನೂ ಇದ್ದೆ. ರೂ.28,25,000 ಹಣಕ್ಕೆ ದಾವಾ ಆಸ್ತಿ ಖರೀದಿ ವ್ಯವಾಹರ ಆಗಿದೆ ಎಂದರೆ ಸರಿಯಲ್ಲ. 2019 ರಲ್ಲಿ ದಾವಾ ಆಸ್ತಿಯ ಎಸ್.ಆರ್.ಮೌಲ್ಯ ರೂ.10 ಲಕ್ಷ ಎಂದರೆ ಸರಿ. ಎಸ್.ಆರ್ ಮೌಲ್ಯದ ಪ್ರಕಾರ ಕ್ರಯ ಪತ್ರದ ನೊಂದಣಿ ಆಗಿದೆ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಕ್ರಯದ ವ್ಯವಹಾರ ಆಗಿದ್ದೆ 10 ಲಕ್ಷಕ್ಕೆ.

ಕ್ರಯದ ವ್ಯವಹಾರ ಆಗುವ ಕಾಲಕ್ಕೆ ನಾನು, ನಾರಾಯಣಪ್ಪ ಮತ್ತು ವೆಂಕಟೇಶ್ ರವರ ಇದ್ದೆವು. ಕ್ರಯದ ವ್ಯವಾಹಾರ ಆಗುವ ಕಾಲಕ್ಕೆ ನಾನು, ನಾರಾಯಣಪ್ಪ ಮತ್ತು ವೆಂಕಟೇಶ್ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯದ ವ್ಯವಹಾರ ಆಗುವ ಕಾಲಕ್ಕೆ ದಾಳವಾಟದ ಚಿನ್ನಪ್ಪನವರು ಮತ್ತು ಅವರ ಸಂಗಡಿಗರು ಇದ್ದರು ಎಂದರೆ ಸರಿಯಲ್ಲ. ಖರೀದಿ ವ್ಯವಹಾರದ ಬಗ್ಗೆ ನನಗೇನು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 468/2018 ಕೇಸನ್ನು ಆನಂದಮ್ಮನವರು ವಾದಿಯ ಮೇಲೆ ಹಾಕಿದ್ದು ಆ ಎಲ್ಲಾ ವಿಚಾರಗಳು ನಮಗೆ ಗೊತಿದ್ದರೂ ಸಹ ಮರೆ ಮಾಚಿ ಕ್ರಯ ಪತ್ರ

ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕ್ರಯದ ವ್ಯವಹಾರದಂತೆ 28,25,000 ರದ ಪೈಕಿ 18,25,000 ಹಣವನ್ನು ನಗದಾಗಿ ಕೊಟ್ಟಿದ್ದು ಉಳಿದ 10 ಲಕ್ಷ ರೂವನ್ನು ಚೆಕ್ ಮಾಲಕ ಪ್ರತಿವಾದಿ ವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಕ್ರಯಪತ್ರ ನೊಂದಣಿ ಆಗುವ 10 ದಿವಸ ಹಿಂದೆ ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಯನ್ನು ಈಗಲೂ ನೋಡಿದ್ದೇನೆ. ದಾವಾ ಆಸ್ತಿಯ ಜಮೀನಿನಲ್ಲಿ ಏನೂ ಇಲ್ಲ ಖಾಲಿ ಇದೆ. ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಪ್ರತಿವಾದಿ ಆ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದು ಸುಮಾರು 25-30 ಲಕ್ಷ ಖರ್ಚು ಮಾಡಿ ದಾವಾ ಆಸ್ತಿಯನ್ನು ಸಮ ಮಾಡಿ ಕಟ್ಟಡ ಕಟ್ಟಿಸಿದ್ದಾರೆ, ಬೋರ್ ವೆಲ್ ಕೊರೆಸಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಅವರಿಗೆ ಸಯಾವಾಗಲೆಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

Sd/-
ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ